'ನೀವೆಲ್ಲ ಚೆನ್ನಾಗಿದ್ದರೆ, ನಿಮ್ಮ ಕೈ ಎತ್ತಿ ಸ್ಮೈಲ್ ಮಾಡಿ' – ಮೆಗಾಫೋನ್ ಮೂಲಕ ಭೂಮಿಯ ಮೇಲ್ಭಾಗದಿಂದ ಭೂಮಿಯ ಆಳ ತಲುಪಿದ ಈ ಮಾತು ಕೇವಲ ಸಂದೇಶವಷ್ಟೇ ಆಗಿರಲಿಲ್ಲ. ಅದು, ಕತ್ತಲ ಪಾತಾಳದಲ್ಲಿ ಬೆಳಕಿನ ನೂಲನ್ನು ಹುಡುಕುವ ಪ್ರಯತ್ನವೂ ಆಗಿತ್ತು. ಈ ಸಂದೇಶದ ಬೆನ್ನಿಗೆ ಮತ್ತೊಂದು ಮಾತು: 'ಕ್ಯಾಮೆರಾದ ಮುಂದೆ ಬರುವ ಯಾರಾದರೂ ಮೊದಲು ಕ್ಯಾಮೆರಾಗೆ ಅಂಟಿದ ಕೆಸರನ್ನು ಒರೆಸಿ, ನಂತರ ನಿಮ್ಮ ಮುಖ ತೋರಿಸಿ ಮಾತನಾಡಿ'. ಮಣ್ಣಾಗಿದ್ದ ಎಂಡೊಸ್ಕೋಪಿಕ್ ಕ್ಯಾಮೆರಾವನ್ನು ಸಣ್ಣ ಬಟ್ಟೆಯಿಂದ ಒರೆಸಿ, ಅದರ ಮುಂದೆ ಕಾಣಿಸಿಕೊಂಡ ವ್ಯಕ್ತಿಯೊಬ್ಬ 'ನಾವೆಲ್ಲ ಚೆನ್ನಾಗಿದ್ದೇವೆ' ಎಂದು ಪ್ರತಿಕ್ರಿಯಿಸಿದ. ಬೆಳಕು ಎಡತಾಕಿದ ಕ್ಷಣವದು.

ಅದು ಎರಡು ನಿಮಿಷದ ವಿಡಿಯೊ. ಉತ್ತರಾಖಂಡದ ಉತ್ತರಕಾಶಿಯ ಸಿಲ್ಕ್ಯಾರಾ ಸುರಂಗ ಕುಸಿತದಲ್ಲಿ ಸಿಲುಕಿಕೊಂಡಿದ್ದ 41 ಕಾರ್ಮಿಕರ ಪೈಕಿ, ಕ್ಯಾಮೆರಾದ ಮುಂದೆ ಬಂದು ಮುಖ ತೋರಿಸಿದಾತನ ಹೆಸರು ಸಾಬಾ ಅಹಮದ್. ಬಿಹಾರ ರಾಜ್ಯದ ಭೋಜಪುರದ ಸಾಬಾನನ್ನು ಕಂಡ ತಕ್ಷಣ ಆತನ ಸಹಕಾರ್ಮಿಕರು, ಮನೆಯವರು, ಬಂಧುಗಳು ಪಟ್ಟ ಆನಂದ ಅಷ್ಟಿಷ್ಟಲ್ಲ. ಭಾರತೀಯನೊಬ್ಬ ಚಂದ್ರನ ಅಂಗಳದ ಮೇಲೆ ಕಾಲಿಟ್ಟರೆ ನಮಗೆ ಎಷ್ಟು ಆನಂದವಾಗಬಹುದೋ ಅಷ್ಟೇ ಸಂತಸ ಆ ಕ್ಷಣದಲ್ಲಿ ಅನಾವರಣಗೊಂಡಿತ್ತು. ಬಂಧುಮಿತ್ರರ ಕಣ್ಣಾಲಿಗಳು ತುಂಬಿಕೊಂಡಿದ್ದವು. ಈ ಚಿತ್ರ ಸಂದೇಶ ರಕ್ಷಣಾ ತಂಡಗಳಿಗೆ ಹೊಸ ಹುಮ್ಮಸ್ಸು ನೀಡಿತ್ತು.

ಹದಿನೇಳು ದಿನಗಳ ಕಾಲ ಸುರಂಗದಲ್ಲಿ ಸಿಲುಕಿಕೊಂಡಿದ್ದ ಅಷ್ಟೂ ಜನ, ರಕ್ಷಣಾ ತಂಡಗಳ ಸಾಂಘಿಕ ಪ್ರಯತ್ನಗಳಿಂದ ಪ್ರಾಣಾಪಾಯದಿಂದ ಪಾರಾಗಿ (ನವೆಂಬರ್ 28ರಂದು) ಹಿಂದಿರುಗಿದರು. ಕತ್ತಲಲ್ಲಿ ಇರುವುದಷ್ಟೇ ಅಲ್ಲ, ಸಾವನ್ನೂ ದೂರತಳ್ಳಿ ಗಟ್ಟಿಯಾಗಿ ನಿಲ್ಲಬೇಕಿತ್ತು. ಆ ಪ್ರಯತ್ನ ಮಾಡಿದ ಎಲ್ಲ 41 ಜನ ಸುರಕ್ಷಿತವಾಗಿ ಮರಳಿದ್ದಾರೆ.

ಚಾರ್‌ಧಾಮ್ ಯೋಜನೆಯ ಭಾಗವಾಗಿ 'ನವಯುಗ ಎಂಜಿನಿಯರಿಂಗ್ ಕಂಪನಿ'ಯವರು ನಿರ್ಮಿಸುತ್ತಿರುವ 4531 ಮೀಟರ್ ಉದ್ದದ ಸಿಲ್ಕ್ಯಾರಾ–ಬಾರ್ಕೋಟ್ ಸುರಂಗದ ಒಂದು ಭಾಗ ಕುಸಿದಾಗ ಜಾರ್ಖಂಡ್, ಉತ್ತರ ಪ್ರದೇಶ, ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಉತ್ತರಾಖಂಡ, ಅಸ್ಸಾಂ ಮತ್ತು ಹಿಮಾಚಲ ಪ್ರದೇಶಕ್ಕೆ ಸೇರಿದ 41 ಜನ ಕಾರ್ಮಿಕರು ಸುರಂಗದ ಒಳಗೆ ಸಿಕ್ಕಿಹಾಕಿಕೊಂಡರು.

ಗಾಢಾಂಧಕಾರದ ಸುರಂಗದ ಇನ್ನೊಂದು ತುದಿಯಲ್ಲಿ ಬೆಳಕಿರುತ್ತದೆ ಎನ್ನುವುದು ಸದಾಶಯದ ರೂಢಿ ಮಾತು. ಸಂಬಂಧಿಕರ ಹಾರೈಕೆ, ಪೂಜೆ, ಪ್ರಾರ್ಥನೆ, ರಕ್ಷಣಾ ತಂಡದ ಪ್ರಯತ್ನಗಳ ಹೊರತಾಗಿಯೂ ಉತ್ತರಕಾಶಿಯ ಸುರಂಗದಲ್ಲಿ ಹದಿನೇಳು ದಿನಗಳ ಕಾಲ ಬಂಧಿಯಾಗಿದ್ದ ನಲವತ್ತೊಂದು ಜನರಿಗೆ ಅಂಥದ್ದೊಂದು ಬೆಳಕು ಕಾಣಲು ಎರಡು ವಾರಗಳೇ ಹಿಡಿದವು. ಮುಸುಕಿದ ಕತ್ತಲ ಮಬ್ಬಿನಲ್ಲಿ ಜೀವವನ್ನು ಕೈಯಲ್ಲಿ ಹಿಡಿದು ಪ್ರಾಣದ ಬೆಳಕು ಕಾಣುತ್ತದೋ ಇಲ್ಲವೋ ಎಂಬ ಆತಂಕವನ್ನೇ ಹೊದ್ದು ನಿಂತವರೀಗ 'ರ್‍ಯಾಟ್ ಹೋಲ್ ಮೈನಿಂಗ್' ತಂತ್ರಜ್ಞಾನದ ನೆರವಿನಿಂದ ಕತ್ತಲ ಕೂಪದಿಂದ ಹೊರಬಂದಿದ್ದಾರೆ. ಈ ಕಾರ್ಯಾಚರಣೆ, ನಿಷೇಧಗೊಂಡಿದ್ದ ತಂತ್ರಜ್ಞಾನವೇ ಸಾವಿನ ಅಂಚಿನಲ್ಲಿದ್ದವರನ್ನು ಮರಳಿ ಬದುಕಿನ ಬೆಳಕಿಗೆ ಕರೆದುಕೊಂಡು ಬಂದ ವಿರೋಧಾಭಾಸಕ್ಕೂ ಸಾಕ್ಷ್ಯವಾಯಿತು. 408 ಗಂಟೆಗಳ ನಂತರ ಎಲ್ಲ ಜೀವಗಳನ್ನೂ ಸುರಕ್ಷಿತವಾಗಿ ಹೊರತರುವಲ್ಲಿ ಏಳು ವಿವಿಧ ತಜ್ಞ ತಂಡಗಳು ಶ್ರಮವಹಿಸಿವೆ.

ಉತ್ತರಕಾಶಿಯ ದುರಂತ ಹಾಗೂ ದುರಂತವನ್ನು ಸುಖಾಂತ್ಯವನ್ನಾಗಿ ಪರಿವರ್ತಿಸಿದ ರಕ್ಷಣಾಕಾರ್ಯ, ವಿಶ್ವದ ವಿವಿಧ ಭಾಗಗಳಲ್ಲಿ ಈ ಮೊದಲು ನಡೆದ ಇಂತಹುದೇ ಘಟನೆಗಳನ್ನು ನೆನಪಿಸುವಂತಿದೆ. ಅಂಥದೊಂದು ಘಟನೆ ನಡೆದದ್ದು ಥಾಯ್ಲೆಂಡ್‌ನಲ್ಲಿ. ಇಡೀ ವಿಶ್ವವನ್ನೇ ಆವರಿಸಿಕೊಂಡ ಬೃಹತ್ ಕಾರ್ಯಾಚರಣೆಯದು.

## ದಿ ಗ್ರೇಟ್ ರೆಸ್ಕ್ಯೂ...

ಅಪಾಯದಲ್ಲಿ ಸಿಲುಕಿದವರ ರಕ್ಷಣಾಕಾರ್ಯಗಳ ಪೈಕಿ ಇಡೀ ವಿಶ್ವವನ್ನೇ ಗಮನ ಸೆಳೆದ ಘಟನೆ ಥಾಯ್ಲೆಂಡ್‌ನಲ್ಲಿ 2018ರಲ್ಲಿ ಸಂಭವಿಸಿತ್ತು. ಅಲ್ಲಿನ ಫುಟ್‌ಬಾಲ್ ತಂಡವೊಂದರ ಹನ್ನೆರಡು ಹುಡುಗರು ಮತ್ತು ಅವರ ತರಬೇತುದಾರ, ಒಟ್ಟು ಹದಿಮೂರು ಜನ ನೀರು ನುಗ್ಗಿದ ಗುಹೆಯೊಂದರಲ್ಲಿ ಸಿಲುಕಿಕೊಂಡು, ಹದಿನೆಂಟು ದಿನಗಳ ಕಾಲ ಸಾವಿನೊಂದಿಗೆ ಸೆಣಸಿ ಜೀವಂತವಾಗಿ ವಾಪಸ್ಸಾಗಿದ್ದರು.

ಇದು ಥಾಯ್ಲೆಂಡ್‌ನ ವೈಲ್ಡ್ ಬೋರ್ ಫುಟ್‌ಬಾಲ್ ತಂಡ ಸಾವನ್ನು ಗೆದ್ದ ಕಥೆ. ಅಂದು ಜೂನ್ 23. ಮಳೆಯಿಂದಾಗಿ ತರಬೇತಿ ಬೇಗನೆ ಮುಗಿದಿತ್ತು. ಎಲ್ಲರೂ 11ರಿಂದ 16 ವರ್ಷದ ಎಳೆಯರು. ಎಂದಿನಂತೆ ಪ್ರಾಕ್ಟೀಸ್ ಮುಗಿಸಿ ಮನೆಗೆ ತೆರಳಬೇಕಿದ್ದ ತಂಡ, ಈಗಲೇ ಮನೆಗೆ ಹೋಗಿ ಮಾಡುವುದೇನು ಎಂದು ಯೋಚಿಸಿ 25ರ ಹರೆಯದ ಪ್ರೀತಿಯ ಕೋಚ್‌ನ ಜೊತೆ ಸೈಕಲ್ ತುಳಿಯುತ್ತ ಕೊನೆಗೆ ತಲುಪಿದ್ದು ಅವರೆಲ್ಲ ಆಗಾಗ ಬಂದು ವಿಹರಿಸುತ್ತಿದ್ದ ಮೂರು ಕಿ.ಮೀ. ದೂರದ ಉತ್ತರ ಥಾಯ್ಲೆಂಡ್‌ನ ಥಾಮ್‌ಲಾಂಗ್‌ನಾಂಗ್ ಎಂಬ ಗುಹೆಯ ಬಳಿ. ಬಿಡುವಿದ್ದಾಗಲೆಲ್ಲ ಅಲ್ಲಿಗೆ ಹೋಗುತ್ತಿದ್ದ ಹುಡುಗರು ಮಳೆ ಸ್ವಲ್ಪ ಜೋರಾಗುತ್ತಿದ್ದಂತೆ ಗುಹೆಯ ಹೊರಭಾಗದಲ್ಲಿ ಸೈಕಲ್‌ಗಳನ್ನು ನಿಲ್ಲಿಸಿ ಒಳಗೆ ಹೋದರು. ಮಳೆ ನಿಲ್ಲುವವರೆಗೆ ಗುಹೆಯ ಒಳಗೇನಿದೆ? ನೋಡೋಣ ಎಂದು ನಿಧಾನವಾಗಿ ಹರಟುತ್ತ, ಹುಡುಕುತ್ತ, ತಡಕಾಡುತ್ತ ನಡೆದೇ ಬಿಟ್ಟರು. ಕೆಲವರು ಹಾಡಿನಲ್ಲಿ ಮುಳುಗಿದ್ದರು. ಹೊರಗೆ ಮಳೆ ಜೋರಾದದ್ದು ಹುಮ್ಮಸ್ಸಿನ ಹುಡುಗರ ತಂಡಕ್ಕೆ ತಿಳಿಯಲೇ ಇಲ್ಲ.



ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿದ 'ರ್‍ಯಾಟ್ ಹೋಲ್ ಮೈನಿಂಗ್' ತಂಡದ 12 ಸದಸ್ಯರು. ಪಿಟಿಐ ಚಿತ್ರ